


# ಯೆಲ್ಲೋಸ್ಟೋನ್ ಪಾರ್ಕ್‌ನ ಗಂಧರ್ವಲೋಕ

**ಮಿಲಿಯಗಟ್ಟಳೆ ವರ್ಷಗಳ ಹಿಂದೆ ಇಲ್ಲಿ ಸಿಡಿದೆದ್ದ ಜ್ವಾಲಾಮುಖಿಗಳು, ಭೂಕಂಪಗಳಿಂದಲೇ ಈ ಭೂಭಾಗ ಇಷ್ಟು ವರ್ಣಮಯವಾಗಿ, ವಿಸ್ಮಯವಾಗಿ ರೂಪುಗೊಂಡಿದೆ. ನೆಲದಾಳದ ಗಂಧಕದ ಪರಿಣಾಮದಿಂದ ತುಂಬಿಕೊಂಡ ನೀರಿನ ಹಬೆ ಭೂಗರ್ಭಶಾಸ್ತ್ರಜ್ಞರಿಗೆ ಪ್ರೇರಣೆ. ಇನ್ನು ಕೆಲವರಿಗೆ ಒಂದು ಕನಸಿನ ಲೋಕದಂತೆ.**

ಚಿತ್ರ– ಲೇಖನ: **ಎಸ್.ಪಿ. ವಿಜಯಲಕ್ಷ್ಮಿ**





‘ಯೆಲ್ಲೋಸ್ಟೋನ್’ ನ್ಯಾಷನಲ್ ಪಾರ್ಕಿಗೆ ವಿಶ್ವದ ಮೊದಲ ಪಾರ್ಕ್ ಎನ್ನುವ ಹೆಗ್ಗಳಿಕೆಯಿದೆ. 1872ರಲ್ಲಿ ರೂಪುಗೊಂಡಿದೆ. ಯೂರೋಪಿಗೆ ಬಹುಪ್ರಾಚೀನದ ಭವ್ಯಪರಂಪರೆ ಇರುವಾಗ, ತಾನು ಯೂರೋಪಿಗೆ ಸೆಡ್ಡು ಹೊಡೆಯಲು ಅಮೆರಿಕಾ ‘ಈ ರತ್ನಗರ್ಭಾ ವಸುಂಧರೆ’ಯನ್ನೇ ವಿಶ್ವಕ್ಕೆ ಪರಿಚಯಿಸಿತು.

ಎಲ್ಲಿ ಕಾಲಿಡಲು ಅಸಾಧ್ಯವಾಗಿತ್ತೋ, ಆ ದುರ್ಗಮ ಹಾದಿಗೆ ಮಾನವ ಆವಿಷ್ಕಾರದ ಸೌಲಭ್ಯಗಳನ್ನೆಲ್ಲ ಕೊಟ್ಟು ವಿಶ್ವ ನಿಬ್ಬೆರಗಾಗುವಂತೆ ಮಾಡಿತು. ಹೌದು, ವಂಡರ್‌ಲ್ಯಾಂಡ್ ಎನ್ನುವ ಪದಕ್ಕೆ ಇಲ್ಲಿ ನಿಜವಾದ ಅರ್ಥ ಸಿಕ್ಕುತ್ತದೆ. ಅದ್ಭುತಗಳಿಂದ ತುಂಬಿರುವ ಈ ವ್ಯವಸ್ಥಿತ ಪಾರ್ಕಿನ ‘ವೆಸ್ಟ್ ಥಂಬ್’ ಮತ್ತು ‘ಗ್ರಾಂಡ್ ಟೇಟನ್’ ಎಂಬ ಭಾಗಗಳು ನಿಜಾರ್ಥದಲ್ಲಿ ಅದ್ಭುತ ತಾಣಗಳೇ ಹೌದು.

8000 ಅಡಿ ಎತ್ತರದ ರಾಕಿ ಪರ್ವತಶ್ರೇಣಿಗಳ ಮಡಿಲಲ್ಲಿರುವ ಈ ಅರಣ್ಯಪ್ರದೇಶದಲ್ಲಿ ಜ್ವಾಲಾಮುಖಿಗಳು, ನದಿ –ಸರೋವರಗಳು, ಜಲಪಾತಗಳು, ಕಣಿವೆ– ಕೊರಕಲುಗಳು, ಪ್ರಾಣಿಸಂಕುಲ, ಸಸ್ಯಸಂಕುಲ ಹೇರಳವಾಗಿದೆ. ಜತೆಗೆ ಬಿಸಿನೀರ ಬುಗ್ಗೆಗಳು, ನೆಲಕುಡಿಕೆಗಳು, ಕಾಮನಬಿಲ್ಲಿನ ವರ್ಣಗಳ ನೆಲಚಿತ್ತಾರ, ಹಬೆಯಾಡುವ ತಾಣಗಳು..! ನಿಜಕ್ಕೂ ಇದು ಗಂಧರ್ವಲೋಕವೇ. ವ್ಯೋಮಿಂಗ್ ರಾಜ್ಯದಲ್ಲಿ ಹೆಚ್ಚಿನ ಭಾಗ ಹರಡಿರುವ ಈ ಪಾರ್ಕ್, ಇದಾಹೋ ಮತ್ತು ಮೊಂಟಾನಾ ರಾಜ್ಯಗಳಿಗೂ ವಿಸ್ತರಿಸಿದೆ.

‘ಗ್ರ್ಯಾಂಡ್ ಟೇಟನ್’ ಎನ್ನುವ ತಾಣಕ್ಕೆ ನಾವು ಬಂದಾಗ ಬೆಳಗಿನ ಎಂಟು ಗಂಟೆ. ಕೊರೆವ ಚಳಿ. ಇಲ್ಲಿಯ ಚೆಲುವಿಗೆ ಥಳಥಳ ಕನ್ನಡಿ ಹಿಡಿದು ನಮ್ಮನ್ನು ಮರುಳುಗೊಳಿಸಲಷ್ಟೇ ಸೂರ್ಯನ ಬೆಳಕಿತ್ತು. ಒಳಹೋದಾಗ ಅದು ಮಾಯಾಲೋಕ. ಎಲ್ಲಿ ನೋಡಲಿ, ಅಳ್ಳಕ ನೆಲದಲ್ಲಿ ಚಿತ್ರಪಟದಂತೆ ನಿಂತ ಗೆರೆಗಳಾಕಾರದ ಬೋಳುಮರಗಳು, ವೃತ್ತಾಕಾರದ ಮರದ ಕಟಕಟೆಯೊಳಗೆ ಕುದಿಯುತ್ತಿರುವ ಮಣ್ಣು–ನೆಲ, ಮಡಕೆಗಳನ್ನು ಹೂಳಿಟ್ಟಂತೆ ಕಾಣುವ ನೆಲದ ಬಾಯಲ್ಲಿ ಕೊತಕೊತನೆ ಕುದಿವ ನೀರು. ದೊಡ್ಡ ದೊಡ್ಡ ವೃತ್ತದೊಳಗೆ ಏಳುವ ಬಿಸಿನೀರ ಬುಗ್ಗೆಗಳು, ವಿಶಿಷ್ಟ ವಾಸನೆಯ ಬಿಳುಪಿನ ಧೂಮ ಏಳುತ್ತಿರುವ ವೃತ್ತಗಳು, ಒಂದಿಷ್ಟು ಸೂಚಿಪರ್ಣ ಮರಗಳು.

ಸೂರ್ಯನ ಬೆಳಕು ಹಿತವಾಗಿ ಅಲ್ಲೆಲ್ಲ ಹರಡಿ ಚೆಲುವು ಮನ ಸೆರೆಹಿಡಿ–ಯುತ್ತಿತ್ತು. ನೆಲದಲ್ಲಿ ಮಡಕೆಯಾಕಾರದ ಗುಂಡಿಯಲ್ಲಿ ಕೊತಕೊತ ಕುದಿಯುತ್ತಿದ್ದ ನೀರು ತೋರಿಸಿ ಹೇಳಿದೆ– ‘ಸೀ, ಮದರ್ ಅರ್ಥ್ ಈಸ್ ಕುಕ್ಕಿಂಗ್ ಬ್ರೇಕ್‌ಫಾಸ್ಟ್ ಫಾರ್ ಅಸ್.’ ನಮ್ಮೊಡನಿದ್ದ ಜರ್ಮನ್ ಮುಖ ಹಿಗ್ಗಿನಿಂದ ಅರಳಿತು. ‘ಯಾ...ಯಾ. ಈ ಜಾಗ, ನಿನ್ನ ಕಲ್ಪನೆ ಎರಡೂ ಸೂಪರ್’ ಎಂದ. ಎಲ್ಲರೂ ಈ ಭೂವಿಸ್ಮಯಕ್ಕೆ ಮರುಳಾಗಿ ಫೋಟೋ ಕ್ಲಿಕ್ಕಿಸುವವರೇ.

ಇಲ್ಲಿ ಕೇವಲ ಮರದ ರಚನೆಯ ವಾಕ್ ವೇಗಳಲ್ಲಿ ಮಾತ್ರ ನಡೆಯಬೇಕು. ಅದು ಬಿಟ್ಟು ನೆಲಕ್ಕೆ ಕಾಲಿಟ್ಟಿರೋ ಏನು ದುರಂತ ಬೇಕಿದ್ದರೂ ಸಂಭವಿಸ–ಬಹುದು. ನೆಲದ ತುಂಬ ತೇವ, ಅಲ್ಲಲ್ಲಿ ಕುದಿಯುವಿಕೆ, ಹೊಗೆಯಾಡುವಿಕೆ–ಯಿಂದ ಭುಸುಗುಡುವ ನೆಲಗರ್ಭದಲ್ಲಿ ಭಯಂಕರ ತಳಮಳ! ನಾವಿಲ್ಲಿ